"ದಿ:04/07/2023 ರಂದು "ಪ್ರಜಾವಾಣಿ" ದಿನ ಪತ್ರಿಕೆಯಲ್ಲಿ ಪ್ರಕಟವಾಗಿದ್ದು"

ರಗೆ ಕೇವಲ 6 ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಬಾಕಿ ಕ್ಯಾಮೆರಾಗಳ ಅಳವಡಿಸುವ ಕಾರ್ಯ ನನೆಗುದಿಗೆ ಬಿದ್ದಿದೆ.

ಕಷ್ಟವಾಗಿದೆ' ಎನ್ನುತ್ತಾರೆ ಪೊಲೀಸರು.

ಬೈಪಾಸ್‌ಗಳಲ್ಲಿ ಕ್ಯಾಮೆರಾ ಕಣ್ಗಾವಲು ಇಡಲಾಗಿತ್ತು. ಸೂಕ್ತ ನಿರ್ವಹಣೆಯಿಲ್ಲದೆ ಬಹುತೇಕ ಕ್ಯಾಮೆರಾಗಳು ಹಾಳಾಗಿವೆ.

ಮುಂಜಾಗ್ರತಾ ಕ್ರಮವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕಿದೆ ಎಂದು ಅಂದಿನ ಎಸ್ಪಿ ಅವರು ಜಿಲ್ಲಾಧಿಕಾರಿಗೆ

# ಅಂಗವಿಕಲ ವಿದ್ಯಾರ್ಥಿಗೆ ಹಣ ಪಾವತಿಸಿ

## ಸಾರಿಗೆ ಸಂಸ್ಥೆಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ

ಪ್ರಜಾವಾಣಿ ವಾರ್ತೆ




ಹಾವೇರಿ: ಮಳೆಯಿಂದ ಹಾನಿಯಾದ ಅಂಗವಿಕಲ ಹಾಗೂ ಮಾನಸಿಕ ಅಸ್ವಸ್ಥ ವಿದ್ಯಾರ್ಥಿಯೊಬ್ಬನ ಬಸ್‌ಪಾಸ್ ಅನ್ನು ಮಾನ್ಯ ಮಾಡದ ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾವೇರಿ ವಿಭಾಗೀಯ ವ್ಯವಸ್ಥಾಪಕರಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹14 ಸಾವಿರ ಪರಿಹಾರ ಮೊತ್ತವನ್ನು 30 ದಿನದೊಳಗಾಗಿ ವಿದ್ಯಾರ್ಥಿಗೆ ಪಾವತಿಸುವಂತೆ ಆದೇಶ ಹೊರಡಿಸಿದೆ.

ಹೊಸರಿತ್ತಿ ಗ್ರಾಮದ ವಿದ್ಯಾರ್ಥಿ ಮಂಜುನಾಥ ವೀರಯ್ಯ ಹುಲಮನಿ ಈತನು ಅಂಗವಿಕಲನಾದ ಹಿನ್ನಲೆಯಲ್ಲಿ ₹660 ಮೊತ್ತ ಪಾವತಿಸಿ ಒಂದು ವರ್ಷದ ಅವಧಿಗೆ ವಿಕಲಚೇತನರ ಪಾಸ್ ಪಡೆದು ತನ್ನ ಗ್ರಾಮದಿಂದ ಪ್ರತಿನಿತ್ಯ ಕನವಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಪ್ರಯಾಣಿಸುತ್ತಿದ್ದನು.

ದಿನಾಂಕ 29-09-2022 ರಂದು ಕಾಲೇಜಿಗೆ ತೆರಳುವ ಸಮಯದಲ್ಲಿ ಅಕಾಲಿಕ ಮಳೆಯಿಂದಾಗಿ ಆತನ ಬಸ್‌ಪಾಸ್ ಒದ್ದೆಯಾಗಿತ್ತು. ಅದರ ಸಂಖ್ಯೆ ಮತ್ತು ಸಹಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಆದರೆ ಹೆಸರು ಮತ್ತು ಪ್ರಯಾಣಿಸಬೇಕಾದ ಊರುಗಳ ಹೆಸರು ಅಳಿಸಿರುವ ಕಾರಣ ಬಸ್‌ನಲ್ಲಿ ಈ ಪಾಸ್ ಅನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಬಸ್ ನಿರ್ವಾಹಕರು ನಿರಾಕರಿಸಿದ್ದರು.

ಪೋಷಕರೊಂದಿಗೆ ವಿದ್ಯಾರ್ಥಿಯು ಹಾವೇರಿ ನಗರದ ಬಸ್ ನಿಲ್ದಾಣದಲ್ಲಿ ಬಸ್ ಪಾಸ್ ವಿತರಿಸುವ ವಿಭಾಗದಲ್ಲಿ ಪಾಸ್‌ನ ಇನ್ನೊಂದು ಪ್ರತಿಯನ್ನು ನೀಡುವಂತೆ ವಿನಂತಿಸಿಕೊಂಡರೂ ಅಧಿಕಾರಿಗಳು ನಿರಾಕರಿಸಿದ್ದರು ಹಾಗೂ ಪಾಸ್ ಅವಧಿ ಕೊನೆಗೊಳ್ಳದಿದ್ದರೂ ಮೊತ್ತೊಮ್ಮೆ ಹಣ ಪಾವತಿಸಿ ಪಾಸ್ ಪಡೆಯಲು ಸೂಚಿಸಿದರು.

ವಿದ್ಯಾರ್ಥಿಯು ಬಡವನಾದ ಕಾರಣ ನಿತ್ಯ ಬಸ್‌ನಲ್ಲಿ ಹಣ ಪಾವತಿಸಿ ಪ್ರಯಾಣಿಸಲು ಸಾಧ್ಯವಾಗದ ಕಾರಣ ಪರೀಕ್ಷೆ ಸಹ ಬರೆಯಲು ಆಗಿರಲಿಲ್ಲ. ಈ ಕುರಿತಾಗಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ದೂರು ದಾಖಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕರ ಆಯೋಗದ ಅಧ್ಯಕ್ಷ ಈಶ್ವರಪ್ಪ ಬಿ.ಎಸ್ ಹಾಗೂ ಮಹಿಳಾ ಸದಸ್ಯರಾದ ಉಮಾದೇವಿ ಎಸ್. ಹಿರೇಮಠ ನೇತೃತ್ವದ ತಂಡ, ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ಉಂಟಾದ ತೊಂದರೆಗೆ ₹10 ಸಾವಿರ, ಮಾನಸಿಕ ಮತ್ತು ದೈಹಿಕ ವ್ಯಥೆಗೆ ₹2 ಸಾವಿರ ಹಾಗೂ ಪ್ರಕರಣದ ಖರ್ಚು ₹2 ಸಾವಿರ ಒಳಗೊಂಡಂತೆ ₹ 14 ಸಾವಿರ ಮೊತ್ತವನ್ನು 30 ದಿನದೊಳಗಾಗಿ ನೊಂದ ವಿದ್ಯಾರ್ಥಿಗೆ ಪಾವತಿಸಲು ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಆದೇಶಿಸಿದೆ.

ತಪ್ಪಿದಲ್ಲಿ ಪರಿಹಾರದ ಮೊತ್ತಕ್ಕೆ ವಾರ್ಷಿಕ ಶೇ 9ರಂತೆ ಬಡ್ಡಿ ಸಮೇತ ಪಾವತಿಸಬೇಕು ಎಂದು ಹಾವೇರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಸೂಚನೆ ನೀಡಿದೆ.

